## - 1 -

## ಸಭಾಪಂಗಡವಲ್ಲದ ಕ್ರೈಸ್ತತ್ವ -

# ಒಂದು ಪರಿಚಯ

ಇಂದು ಜಗತ್ತು ಸಭಾಪಂಗಡವಲ್ಲದ ಕ್ರೈಸ್ತತ್ವದ ಬಗ್ಗೆ ಏನನ್ನೂ ತಿಳಿದಿರುವದಿಲ್ಲ. ಅನೇಕರಿಗೆ, ಒಬ್ಬ ವ್ಯಕ್ತಿಯು ಕೇವಲ ಕ್ರೈಸ್ತನಾಗಿರುವನು ಎಂಬ ಭಾವನೆಯನ್ನು ಸ್ವೀಕರಿಸುವುದು ಕಷ್ಟಕರವಾದದ್ದಾಗುತ್ತದೆ. ಒಬ್ಬನು ತಾನು ಕ್ರೈಸ್ತನೆಂದು ಒಪ್ಪಿಕೊಳ್ಳುವಾಗಲೇ "ನೀನು ಯಾವ ಸಭಾಪಂಗಡಕ್ಕೆ ಸೇರಿದವನು?" ಎಂಬ ಪ್ರಶ್ನೆ ಬರುತ್ತದೆ. ಒಬ್ಬ ವ್ಯಕ್ತಿಯು ಕ್ರೈಸ್ತನಾಗಿರಬಹುದು ಮತ್ತು ಯಾವುದೋ ಸಭಾಪಂಗಡಕ್ಕೆ ಸೇರಿದವನಾಗಿರುವದಿಲ್ಲ ಎಂಬ ಭಾವನೆಯು ತಿರಸ್ಕರಿಸಲ್ಪಡಬಹುದು. ಒಬ್ಬನು ಕ್ರೈಸ್ತನೆಂದು ಹೇಳಿಕೊಳ್ಳಲು ಧೈರ್ಯಗೊಂಡು, ಸಭಾಪಂಗಡಕ್ಕೆ ಸೇರುವದನ್ನು ಅಲ್ಲಗಳೆಯಬಹುದು. ಆದರೂ ಅವನ ಮೇಲೆ ಸಭಾಪಂಗಡದ ಹೆಸರು ಹೊರೆಯಲ್ಪಡುವುದು.

ಅಂಥ ಕೆಲವು ಕ್ರೈಸ್ತರು, ಯಾವುದೇ ಸಭಾಪಂಗಡದೊಂದಿಗೆ ಅನ್ಯೋನ್ಯತೆಯಿಲ್ಲವೆಂದು ಹೇಳಿಕೊಂಡು ವಿಶ್ವಾಸಿಗಳ ಒಂದು ಸಭೆಯಂತೆ ಕೆಲಸ ಮಾಡಲು ಮತ್ತು ಆರಾಧಿಸಲು ಪ್ರಾರಂಭಿಸಿದರೆಂದು ತಿಳಿಯಿರಿ. ಕ್ರೈಸ್ತರಾಗಿದ್ದೇವೆ ಮತ್ತು ಕೇವಲ ಕ್ರೈಸ್ತರಾಗಿದ್ದೇವೆ, ಕ್ರಿಸ್ತನ ಸಭೆಯ ಸದಸ್ಯರಾಗಿದ್ದೇವೆ ಮತ್ತು ಅದು ಮಾತ್ರವೇ ಆಗಿದ್ದೇವೆ ಎಂದು ಅವರು ಹೇಳಿಕೊಂಡರೂ ಯಾವ ತನಿಖೆಯಿಲ್ಲದೇ, ಅನಿವಾರ್ಯವಾದದ್ದು ಸಂಭವಿಸುವುದು: ಅವರು ಒಂದು ಸಭಾಪಂಗಡದ ಹಣೆಪಟ್ಟಿ ಹೊಂದಿಕೊಳ್ಳುವರು.[1]

ಕ್ರೈಸ್ತರಿಗೆ ಕೇವಲ ಕ್ರೈಸ್ತರಾಗಿರುವುದು ಮತ್ತು ಸಭೆಗೆ ಕೇವಲ ಕ್ರಿಸ್ತನ ಸಭೆಯಾಗಿರುವುದು ಅಸಾಧ್ಯವೆಂದು ಅನೇಕರು ಯೋಚಿಸುತ್ತಾರೆ. ಜನರು ದೇವರ ಆತ್ಮನಿಂದ ಮಾತನಾಡಿದ ದಿನಗಳಲ್ಲಿ ಯೆರೂಸಲೇಮಿನಲ್ಲಿದ್ದ ಸಭೆಗೆ ಅಂಥ ಗೌರವವನ್ನೂ ಶ್ರೇಷ್ಠತೆಯನ್ನೂ ಯಾರೂ ಅಲ್ಲಗಳೆಯುವದಿಲ್ಲ ಎಂದು ನಾನು ಕಲ್ಪಿಸಿಕೊಳ್ಳುತ್ತೇನೆ. ಅಪೊಸ್ತಲರ ಕೃತ್ಯಗಳ ಗ್ರಂಥದ ಮೊದಲಿನ ಏಳು ಅಧ್ಯಾಯಗಳು ಈ ಸಭೆಯ ಸಂಘಟನೆಯನ್ನೂ ಪ್ರಾರಂಭದ ಕಾರ್ಯವನ್ನು ಕುರಿತ ಚರಿತ್ರೆಯನ್ನು ಕೊಡುತ್ತವೆ. ಅದಕ್ಕೆ ಅದರ ಸಾವಿರಾರು ಜನ ಸದಸ್ಯರು ಇದ್ದರು; ಈ ಎಲ್ಲಾ ವಿಶ್ವಾಸಿಗಳು ಕೇವಲ ಕ್ರೈಸ್ತರಾಗಿದ್ದರು. ಅವರಲ್ಲಿ ಯಾರೂ ನಮ್ಮ ಕರ್ತನ ಶಿಷ್ಯನಿಗಿಂತ ಹೆಚ್ಚಿನವನು ಎಂದು ಹೇಳಿಕೊಳ್ಳಲಿಲ್ಲ. ಪ್ರತಿಯೊಬ್ಬ ವ್ಯಕ್ತಿಯು ರಕ್ಷಿಸಲ್ಪಟ್ಟು ಕರ್ತನಿಂದ ಸಭೆಗೆ ಸೇರಿಸಲ್ಪಟ್ಟನು - ಯಾವ ಸಭೆಗೆ? ಯಾವ ಸಭಾಪಂಗಡಕ್ಕೆ ಈ ಎಲ್ಲಾ ಕ್ರೈಸ್ತರು ಒಳಪಟ್ಟಿದ್ದರು? ಆ ಸಮಯದಲ್ಲಿ ಅವರು ಒಳಪಡಬೇಕಾಗಬಹುದಾಗಿದ್ದ ಒಂದೂ ಭೂಲೋಕದಲ್ಲಿ ಇರಲಿಲ್ಲ.

ಯೆರೂಸಲೇಮಿನಲ್ಲಿ ಸಾವಿರಾರು ಜನರು ಕ್ರಿಸ್ತನ ಶಿಷ್ಯರಾದರೆ, ರಕ್ಷಿಸಲ್ಪಟ್ಟರೆ ಮತ್ತು ಸಭೆಗೆ ಸೇರಿಸಲ್ಪಟ್ಟರೆ - ಅವರಲ್ಲಿ ಯಾರೂ ಒಂದು ಸಭಾಪಂಗಡಕ್ಕೆ ಸೇರಿರದಿದ್ದರೆ, ಆದರೆ "ಸಭೆಗೆ" ಮಾತ್ರ ಒಳಪಟ್ಟಿದ್ದರೆ - ಇಂದು ಸಾವಿರಾರು ಜನರು ಯಾಕೆ ಅದನ್ನೇ ಮಾಡಬಾರದು ಮತ್ತು ಅದರಂತಿರಬಾರದು? ಅವರಿರುವಂತೆ ಅಂಥ ಕ್ರೈಸ್ತರು, ಶಿಷ್ಯರು ಮತ್ತು ರಕ್ಷಿಸಲ್ಪಟ್ಟ ಜನರು ಆಗಿರುವಂಥ ಅವಕಾಶವು ನಮಗೆ ಯಾಕೆ ಅಲ್ಲಗಳೆ

ಯಲ್ಪಡಬೇಕು? ಅವರು ರಕ್ಷಿಸಲ್ಪಟ್ಟು, ಕ್ರೈಸ್ತ ಜೀವಿತ ಜೀವಿಸಿ, ಶಿಷ್ಯರಂತೆ ಮತ್ತು "ಸಭೆಯ" ಸದಸ್ಯರಂತೆ ದೇವರಿಗಾಗಿ ಕಾರ್ಯ ಮಾಡುತ್ತಾ ಆರಾಧಿಸಿದ್ದರೆ, ಯಾಕೆ ನಾನು ಅದನ್ನು ಮಾಡಬಾರದು? ನನಗೆ ಯಾವುದು ಅಡ್ಡಿಯಾಗಿರುವುದು? ನಮ್ಮ ಕರ್ತನ ಅಪೊಸ್ತಲರಿಂದಲೇ ಮಾರ್ಗದರ್ಶನ ಹೊಂದುತ್ತ, ಈ ಜನರು "ಸಭೆಗೆ" ಕೂಡಿಸಲ್ಪಡುತ್ತಿದ್ದರೆ, ಅವರು ಇದ್ದಂತೆ ಇರುವುದು ನಮಗೆ ಸುರಕ್ಷಿತವಾದದ್ದೂ, ಪರಿಪೂರ್ಣವಾಗಿ ಸುರುಕ್ಷಿತವಾದದ್ದೂ ಆಗಿರುವದಿಲ್ಲವೇ? ಪ್ರೇರೇಪಿತ ಅಪೊಸ್ತಲರಲ್ಲಿ ಆತ್ಮನ ಈ ಪರಿಶುದ್ಧ ಉದಾಹರಣೆಯನ್ನು ಕಡೆಗಣಿಸುವುದು ಅತಿಶಯವಾಗಿ ಗಂಡಾಂತರ ಕಾರಿಯಾದದ್ದಾಗಿರುವದಿಲ್ಲವೇ? "ಯಾರಾರು ದೇವರ ಆತ್ಮನಿಂದ ನಡಿಸಿ ಕೊಳ್ಳುತ್ತಾರೋ ಅವರು ದೇವರ ಮಕ್ಕಳು" (ರೋಮಾಪುರ 8:14).[2]

ಆದಿ ಶಿಷ್ಯರ ಈ ಉದಾಹರಣೆಯನ್ನು ಅನುಸರಿಸುವದರಲ್ಲಿ ಸೋತುಹೋದರೆ, ದೇವರ ಆತ್ಮನ ನಾಯಕತ್ವವನ್ನು ಅನುಸರಿಸುವದರಲ್ಲಿ ನಿಶ್ಚಯವಾಗಿ ಸೋತು ಹೋಗುವುದಾಗಿದೆ, ಮತ್ತು ದೇವರ ಆತ್ಮನನ್ನು ಅನುಸರಿಸುವದರಲ್ಲಿ ಸೋತು ಹೋಗುವುದು ದೇವರ ವಿಧೇಯ ಮಕ್ಕಳಾಗುವದರಲ್ಲಿ ಸೋತುಹೋಗುವುದಾಗಿದೆ. ದೇವರ ನಂಬಿಗಸ್ತ ಮಕ್ಕಳಾಗಿರುವದಕ್ಕೆ ಒಂದೇ ಮಾರ್ಗವು ಸ್ಪಷ್ಟವಾಗಿ ಪರಿಶುದ್ಧಾತ್ಮನನ್ನು ಅನುಸರಿಸುವುದಾಗಿದೆ; ಮತ್ತು ಪರಿಶುದ್ಧಾತ್ಮನನ್ನು ಅನುಸರಿಸುವುದು ಯಾವುದೇ ಸಭಾಪಂಗಡಕ್ಕೆ ಸೇರದಿರುವುದು ಆಗಿದೆ, ಆದರೆ ಶಿಷ್ಯರು ಮಾತ್ರವೇ, ಕ್ರೈಸ್ತರು ಮಾತ್ರವೇ ಆಗಿದೆ, ರಕ್ಷಿಸಲ್ಪಟ್ಟವರು ಮತ್ತು ಆತನ ಸಭೆಗೆ ಕೂಡಿಸಲ್ಪಟ್ಟವರು ಆಗಿದೆ, ಯಾಕಂದರೆ ನಾವು ರಕ್ಷಿಸಲ್ಪಟ್ಟಿದ್ದೇವೆ.

ಕರ್ತನ ಪ್ರೇರಿತ ಅಪೊಸ್ತಲರ ಮುಖಾಂತರ ಮತ್ತು ಪ್ರವಾದಿಗಳ ಮುಖಾಂತರ ಲೋಕಕ್ಕೆ ಕೊಡಲ್ಪಟ್ಟ ನಮ್ಮ ಕರ್ತನ ಧರ್ಮವು ಸಾಕಷ್ಟು ಒಳ್ಳೆಯದಾಗಿರುವದಿಲ್ಲವೋ? ಅದು ಸಾಕಷ್ಟು ಶುದ್ಧವಾದದ್ದಾಗಿರುವದಿಲ್ಲವೋ? ಅದರ ಮೇಲೆ ಸುಧಾರಣೆಯನ್ನು ಒದಗಿಸಲು ನನಗೆ ಧೈರ್ಯವಿದೆಯೋ?

ಒಬ್ಬನು ನಮ್ಮ ಕರ್ತನ ಹೊಸ ಒಡಂಬಡಿಕೆಯನ್ನು ತೆಗೆದುಕೊಂಡು, ನಂಬಿಗಸ್ತಿಕೆಯಿಂದ ಅದನ್ನು ಅಭ್ಯಾಸಮಾಡಿ, ಅದರ ಕ್ರಿಸ್ತನಿಗೆ ಹೃದಯ ಪೂರ್ವಕ ವಾಗಿ ತನ್ನನ್ನು ಒಪ್ಪಿಸಿಕೊಂಡು, ಈ ಕರ್ತನ ಆಜ್ಞೆಗಳಿಗೆ ಹೃದಯದಿಂದ ವಿಧೇಯ ನಾಗುವನೆಂದು ತಿಳಿಯಿರಿ. ಹೊಸ ಒಡಂಬಡಿಕೆಯ ಕ್ರಿಸ್ತನು ಅವನಿಗೆ ಬೋಧಿಸುವದನ್ನು ಸತತವಾಗಿ ಮಾಡಲು ಹೋರಾಡಿದರೆ - ಮತ್ತು ಕ್ರಿಸ್ತನು ತನ್ನನ್ನು ನಡಿಸುವದನ್ನು ಬಿಟ್ಟು ಬೇರೆ ಯಾವುದನ್ನು ಮಾಡುವದನ್ನು ನಿರಾಕರಿಸಿದರೆ - ಅವನು ಏನಾಗುವನು ಮತ್ತು ಏನಾಗಿರುವನು? ಅವನು ನಿಶ್ಚಯವಾಗಿಯೂ ಕ್ರಿಸ್ತನ ಶಿಷ್ಯನಾಗಿರುವನು, ನಿಜವಾಗಿಯೂ ರಕ್ಷಣೆಯನ್ನು ಕಂಡುಕೊಳ್ಳುವನು, ಮತ್ತು ನಿಶ್ಚಯವಾಗಿಯೂ "ಸಭೆಗೆ" ಕೂಡಿಸಲ್ಪಡುವನು. ಯೆರೂಸಲೇಮಿನ ಶಿಷ್ಯರಂತೆಯೇ ಆಗುವನು.

ಅಂಥ ನೂರು ಧಾರ್ಮಿಕ ಜನರು ಒಂದು ಪಟ್ಟಣದಲ್ಲಿ ವಾಸಿಸುತ್ತಿರುವರೆಂದು ತಿಳಿಯಿರಿ. ಯೇಸುವನ್ನು ಬಿಟ್ಟು ಬೇರೆ ಕರ್ತನನ್ನು ಮತ್ತು ಅವರು ರಕ್ಷಿಸಲ್ಪಟ್ಟಂತೆ ಕರ್ತನು ಅವರನ್ನು ಕೂಡಿಸಿದ ಸಭೆಯನ್ನು ಬಿಟ್ಟು ಬೇರೆ ಸಭೆಯನ್ನು ತಿಳಿಯದೇ, ಅವರು ದೇವರನ್ನು ಆರಾಧಿಸಲು ಸಭೆಯಾಗಿ ಒಟ್ಟಾಗಿ ಕೂಡಿಬಂದರೆ, ಈ ನೂರು

ಜನ ಶಿಷ್ಯರು ಯಾವ ಸಭೆಯನ್ನು ಪಟ್ಟಣದಲ್ಲಿ ರಚಿಸುವರು? ಅವರು ಯಾವ ಸಭಾಪಂಗಡಕ್ಕೆ ಸೇರಿರುವರು? ಯಾವುದಕ್ಕೂ ಅಲ್ಲ; ಕ್ರಿಸ್ತನಿಂದ ಸ್ಥಾಪಿಸಲ್ಪಟ್ಟ ಸಭೆಗೆ ಅವರು ಸುಮ್ಮನೆ ಒಳಗೊಂಡಿರುವರು.

ಟಿಪ್ಪಣಿಗಳು

[1]ಸಂಪಾದಕರ ಟಿಪ್ಪಣಿಯನ್ನು ನೋಡಿರಿ. [2]ಟಿಪ್ಪಣಿ ಮಾಡಿರದಿದ್ದರೆ ಪರಿಶುದ್ಧ ಬರಹದ ಉಲ್ಲೇಖಗಳು 1901ರಲ್ಲಿಯ ಅಮೇರಿಕನ್ ರಿವಿಜನ್ ಕಮಿಟಿಯಿಂದ ಪರಿಷ್ಕರಿಸಲ್ಪಟ್ಟ ಅಮೇರಿಕನ್ ಸ್ಟ್ಯಾಂಡರ್ಡ್ ಆವೃತ್ತಿಯಿಂದ ತೆಗೆದು ಕೊಳ್ಳಲ್ಪಟ್ಟಿರುತ್ತವೆ.

© 2009 Truth for Today